ಆ) ಉದ್ಭವಿಸುವುದಿಲ್ಲ.

ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ ಭೂಮಾಲೀಕರಿಗೆ ಪರಿಹಾರ ಧನ ವಿತರಣೆ.

1047 (1528)

ಡಾ: ಎಂ.ಪಿ.ಕರ್ಕಿ (ಕುಮಟಾ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸುಧಾರಣೆ ಕಾಯಿದೆ ಅಡಿಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಭೂಮಾಲೀಕರಿಗೆ ಪರಿಹಾರ ಕೊಡದೆ ಬಾಕಿ ಇರುವ ಪರಿಹಾರದ ಮೊತ್ತವೆಷ್ಟು?

ಆ) ಈ ರೀತಿ ಬಾಕಿ ಇರಲು ಕಾರಣವೇನು?

ಇ) ಭೂಮಾಲೀಕರಿಗೆ ಪೂರ್ತಿಯಾಗಿ ಯಾವಾಗ ಪಾವತಿ ಮಾಡಲಾಗುವುದು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ರೂ. 1,81,40,392-00.

ಆ) 1. ಭೂಮಾಲೀಕರಿಗೆ ಸಂದಾಯವಾಗತಕ್ಕ ಭೂಪರಿಹಾರ ಮೊತ್ತವನ್ನು ಒಯ್ಯಲು ತಿಳಿಸಿದರೂ ಕೆಲವೊಂದು ಭೂಮಾಲೀಕರು ಬಂದು ಒಯ್ಯದೇ ಇರುವುದರಿಂದ.

2. ಕೆಲವೊಂದು ಭೂಮಾಲೀಕರ ವಿಳಾಸ ಪತ್ತೆಯಾಗುತ್ತಿಲ್ಲ ಹಾಗೂ ಅವರು ಎಲ್ಲಿ ವಾಸಿಸುತ್ತಾರೆ ಎಂಬುದು ಸಹ ತಿಳಿದುಬರುವುದಿಲ್ಲ.

3. ಕೆಲವೊಂದು ಭೂಮಾಲೀಕರಿಗೆ ಸಿಗುವ ಮೊತ್ತ ಅತ್ಯಲ್ಪವಾಗಿದ್ದು ಅಂತಹ ಮೊತ್ತವನ್ನು ಸ್ವೀಕರಿಸಲು ಭೂಮಾಲೀಕರು ಬರುತ್ತಿಲ್ಲ.

4. ಕೆಲವೊಂದು ತಹಸೀಲ್ದಾರರು ಭೂಮಾಲೀಕರಿಗೆ ನೋಟೀಸು ನೀಡಿ ಸ್ಥಾನಿಕ ಪತ್ರಿಕೆಗಳಲ್ಲಿಯೂ ಪ್ರಕಟಿಸಿರುವುದಾಗಿ ತಿಳಿಸಿರುತ್ತಾರೆ.

ಇ) ಸರಕಾರವು ತಮ್ಮ ಟೆಲೆಕ್ಸ್ ಸಂದೇಶ ಸಂ.ಆರ್‌ಡಿ 7 ಎಲ್‌ಆರ್‌ಎಸ್ 97 ದಿ:3-3-98ರ ಪ್ರಕಾರ 30-6-98ರ ಒಳಗೆ ಪರಿಹಾರ ಪಡೆಯದೆ ಇದ್ದ ಭೂ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ಬಾಕಿ ಇರುವ ಪರಿಹಾರ ಧನವನ್ನು ಬಟವಾಡೆ ಮಾಡಲು ಸೂಚಿಸಿದ್ದು ಇರುತ್ತದೆ. ಅದರಂತೆ ಎಲ್ಲಾ ತಹಸೀಲ್ದಾರರು ಸಂಬಂಧಪಟ್ಟ ಭೂಮಾಲೀಕರಿಗೆ ನೋಟೀಸು ನೀಡುವುದಾಗಿ ಹಾಗೂ ಈ ಬಗ್ಗೆ ದಿನ ಪತ್ರಿಕೆಯಲ್ಲಿ

ಪ್ರಕಟಿಸುವುದಾಗಿ ತಿಳಿಸಿರುತ್ತಾರೆ.

2. ಭೂಮಾಲೀಕರಿಂದ ಅವಶ್ಯವುಳ್ಳ ದಾಖಲೆಗಳನ್ನು ಹಾಜರುಪಡಿಸಿಕೊಂಡು ಹಾಗೂ ವಿಳಾಸ ಲಭ್ಯವಿರದೇ ಇದ್ದ ಭೂಮಾಲೀಕರ ವಿಳಾಸಗಳನ್ನು ತಿಳಿದುಕೊಂಡು ಆದಷ್ಟು ಶೀಘ್ರ ಬಾಕಿ ಇರುವ ಭೂ ಪರಿಹಾರವನ್ನು ಬಟವಾಡೆ ಮಾಡಲಾಗುವುದು.

ವಿಷಯ: ಆರಾಧನಾ ಯೋಜನೆಯಡಿಯಲ್ಲಿನ ಅನುದಾನ.

1048 (1424)

ಶ್ರೀ ಕುಂಬೈ ಸುಂದರ್‌ರಾವ್ (ಸುರತ್ಕಲ್): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರಾಧನಾ ಯೋಜನೆಯಡಿಯಲ್ಲಿ ಅನುದಾನವನ್ನು ಬಿಡುಗಡೆಗೊಳಿಸುವುದಕ್ಕೆ ಇರುವ ನಿಯಮಗಳೇನು, ಅವನ್ನು ಕಟ್ಟನಿಟ್ಟಾಗಿ ಜಾರಿಗೊಳಿಸಲಾಗಿದೆಯೇ?

ಆ) ಕೇವಲ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಮಾತ್ರ ಅನುದಾನವೆಂಬ ನಿರ್ಣಯದಿಂದ ಇತರ ದುರ್ಬಲ ವರ್ಗಗಳಿಗೆ ಅವರ ಆರಾಧನಾ ಕೇಂದ್ರಗಳಿಗೆ ಅನ್ವಯವಾಗುವುದಿಲ್ಲವೇ?

ಇ) ಆರ್ಥಿಕವಾಗಿ ದುರ್ಬಲವಾಗಿರುವ ಎಲ್ಲಾ ವರ್ಗದವರಿಗೆ ಈ ಯೋಜನೆಯನ್ನು ಅನ್ವಯ ಮಾಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಬಿ.ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ಸರ್ಕಾರದ ಆದೇಶ ಸಂ.ಕಂಇ 104 ಮುಇವಿ 95 ದಿನಾಂಕ : 8-1-97ರಲ್ಲಿ ಹೊರಡಿಸಿದ ಮಾರ್ಗಸೂಚಿಯಂತೆ ಈ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಲಂಬಾಣಿ ತಾಂಡ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗ, ಸಮೂಹ 'ಎ' ಜನರು ವಾಸಿಸುವ ಕಡೆಗಳಲ್ಲಿ ಪೂಜಾ ಮಂದಿರದ ದುರಸ್ಥಿ ಅಭಿವೃದ್ಧಿ ಮತ್ತು ನಿರ್ಮಾಣಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಈ ನಿಯಮವನ್ನು ಸಾಧ್ಯವಾದ ಮಟ್ಟಿಗೆ ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆ.

ಆ) ಈಗಾಗಲೇ ಈ ಸೌಲಭ್ಯವನ್ನು ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗ 'ಎ' ಗುಂಪಿಗೂ ವಿಸ್ತರಿಸಿರುವುದರಿಂದ ಇದು ಉದ್ಭವಿಸುವುದಿಲ್ಲ.

ಇ) ಇಲ್ಲ.

ವಿಷಯ: ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗಿರಿಜನರ ಸಮಗ್ರ